ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹೊನ್ನಾಳಿ.

ಸಿ.ಸಿ.ನಂ.396/2024

ಪಿರ್ಯಾದುದಾರರು : ನ್ಯಾಮತಿ ಪೋಲೀಸ್ ಠಾಣೆ

ವಿರುದ್ಧ

ಆರೋಪಿ : 1. ರಾಘವೇಂದ್ರ ಕೆ. ಎಸ್
ಬಿನ್ ಶಿವಪ್ಪ ಜಿ. ಎಸ್, 43 ವರ್ಷ,
ವಾಸಃ ಸಿದ್ದೇಶ್ವರ ಸರ್ಕಲ್, ಗೋಪಾಳ,
ಶಿವಮೊಗ್ಗ ಟೌನ್, ಶಿವಮೊಗ್ಗ.

ಭಾ. ದಂ. ಪ್ರ. ಸಂ. ಕಲಂ. 313 ರನ್ವಯ ಆರೋಪಿಗಳ ಹೇಳಿಕೆ

ಪ್ರಶ್ನೆ.1: ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿ ತಿಳಿದುಕೊಂಡಿದ್ದೀರಾ?
ಉತ್ತರ :

ಪ್ರಶ್ನೆ.2: ಪ್ರಾಸಾ.6 ಉಮೇಶ್ ಕೆ.ಎಲ್ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿಃ 22.02.2024 ರಂದು ತಾನು ಠಾಣಾ ಪ್ರಭಾರ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ನೀಡಿದ್ದು, ಸದರಿ ದೂರನ್ನು ಸ್ವೀಕರಿಸಿ, ಠಾಣಾ ಗುನ್ನೆ ನಂ.38/2024 ರಂತೆ ಪ್ರಕರಣವನ್ನು ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಪ್ರತಿಯನ್ನು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 17 ರವರಿಗೆ ಹಸ್ತಾಂತರಿಸಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳಲು ಇಚ್ಚಿಸುತ್ತೀರಿ?
ಉತ್ತರ :

ಪ್ರಶ್ನೆ.3: ಪ್ರಾಸಾ.7 ರವಿ ಎನ್. ಎಸ್ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿಃ 22.02.2024 ರಂದು ಈ ಕೇಸಿನ ಕಡತವನ್ನು ಚಾಸಾ 16 ರವರಿಂದ ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ. ಅದೇ ದಿನ ರಾತ್ರಿ 7 ಗಂಟೆಗೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯ ಶವಾಗಾರಕ್ಕೆ ಹೋಗಿ ಅಪಘಾತದಲ್ಲಿ ಮೃತಪಟ್ಟ ಏಳುಮಲೈ ರವರ ಶವ ಪಂಚನಾಮೆಯನ್ನು ಪಂಚರ ಸಮಕ್ಷಮ ಜರುಗಿಸಿ, ಚಾಸಾ 4 ರಿಂದ 6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 23.02.2024 ರಂದು ಸಂಜೆ 4.30 ರ ಸಮಯದಲ್ಲಿ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಚಾಸಾ 7 ರವರು ಸ್ಥಳ ತೋರಿಸಿದ ಮೇರೆಗೆ ಚಾಸಾ 10 ಮತ್ತು 11 ರವರ ಸಮಕ್ಷಮ ಸಂಜೆ 4.30 ರಿಂದ 5.15 ರ ಸಮಯದಲ್ಲಿ ಸ್ಥಳ ಪಂಚನಾಮೆ ತಯಾರಿಸಿ, ಕಚ್ಚಾ ನಕಾಶೆ ತಯಾರಿಸಿ, ಫೋಟೋಗಳನ್ನು ತೆಗೆಸಿರುತ್ತೇನೆ. ಅದೇ ದಿನ ಸವಳಂಗ ಉಪಪೋಲೀಸ್ ಠಾಣೆಯಲ್ಲಿ ಅಪಘಾತಕಕ್ಕೊಳಗಾದ ವಾಹನಗಳ ಅಮಾನತ್ತು ಪಂಚನಾಮೆಯನ್ನು ಪಂಚರ ಸಮಕ್ಷಮ ಜರುಗಿಸಿ, ಕೆಎ 14 ಬಿ 8467 ನಂಬರ್ ನ ಎರಟಿಗ ಕಾರು ಹಾಗೂ ಕೆಎ 17 ಇಎಲ್ 8741 ನಂಬರ್ ನ ಹೆಚ್ ಪಿ ಡಿಲಕ್ಸ್ ಬೈಕ್ ನ್ನು ಅಮಾನುತ್ತುಪಡಿಸಿಕೊಂಡು ಪೋಟೋಗಳನ್ನು ತೆಗೆಸಿರುತ್ತೇನೆ.

ಮುಂದುವರೆದು ಸಾಕ್ಷಿಯು ದಿಃ 26.02.2024 ರಂದು ಚಾಸಾ 12 ರವರಿಂದ ಐಎಂವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಅಪಘಾತಕ್ಕೊಳಗಾದ ಕಾರಿನ ಮಾಲೀಕರಾದ 1 ನೇ ಆರೋಪಿಯು ಠಾಣೆಗೆ ಹಾಜರಿದ್ದು ದಸ್ತಗಿರಿ ಕ್ರಮ ಜರುಗಿಸಿ, ಠಾಣಾ ಜಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಕಾರಿನ ದಾಖಲಾತಿಗಳ ಮಾಹಿತಿ ಕೋರಿ ಅವರಿಗೆ ಪೋಲೀಸ್ ನೋಟೀಸ್ ಜಾರಿ ಮಾಡಿ ಅವರಿಂದ ಸಮಜಾಯಿಷಿಕೆ ಮತ್ತು ಇಂಡಿಮಿನಿಟಿಬಾಂಡ್ ಪಡೆದುಕೊಂಡು ಸದರಿ ಕಾರನ್ನು ಬಿಡುಗಡೆ ಮಾಡಿರುತ್ತೇನೆ. ದಿಃ 14.03.2024 ರಂದು ಚಾಸಾ 13 ರವರಿಂದ ಮೃತನ ಪಿಎಂ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 20.04.2024 ರಂದು ಅಪಘಾತಕ್ಕೊಳಪಟ್ಟ ಬೈಕ್ ನ ಮಾಲೀಕರಾದ ಚಾಸಾ 1 ರವರಿಗೆ ಪೋಲೀಸ್ ನೋಟೀಸ್ ಜಾರಿ ಮಾಡಿ ಅವರಿಂದ ಸಮಜಾಯಿಷಿಕೆಯನ್ನು ಪಡೆದುಕೊಂಡು ಸದರಿ ಬೈಕ್ ಗೆ ವಿಮೆ ಇಲ್ಲದ ಕಾರಣ ಬೈಕ್ ನ್ನು ಅಮಾನತ್ತುಪಡಿಸಿಕೊಂಡು ಮಾಲುಪಟ್ಟಿಯಲ್ಲಿ ಸೇರಿಸಿರುತ್ತೇನೆ. ಫೋಟೋಗಳಿಗೆ ಸಂಬಂಧಿಸಿದ 65 ಬಿ ಪ್ರಮಾಣ ಪತ್ರವನ್ನು ಚಾಸಾ 15 ರವರಿಂದ ಪಡೆದುಕೊಂಡಿರುತ್ತೇನೆ. ತನಿಖೆ ಪೂರ್ಣಗೊಳಿಸಿ ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳಲು ಇಚ್ಛಿಸುತ್ತೀರಿ?

ಉತ್ತರ :

ಪ್ರಶ್ನೆ.4: ನೀವು ಹೇಳುವುದು ಏನಾದರೂ ಇದೆಯೇ ?

ಉತ್ತರ : ಆ 1).

ಪ್ರಶ್ನೆ.5: ನಿಮ್ಮ ಪರ ಯಾರಾದರೂ ಸಾಕ್ಷಿದಾರರನ್ನು ವಿಚಾರಣೆ ಮಾಡಿಕೊಳ್ಳುವಿರಾ ?

ಉತ್ತರ : ಆ 1).

(ಸಾಕ್ಷಿ ವಿಚಾರಣೆಯಲ್ಲಿ ಕಂಡು ಬಂದ ಅಂಶಗಳ ಸಂಕ್ಷಿಪ್ತ ವಿವರಗಳನ್ನು ಆರೋಪಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಹೇಳಿದಂತೆ ಉತ್ತರಗಳನ್ನು ಬರೆದುಕೊಳ್ಳಲಾಯಿತು ಎಂದು ದೃಢೀಕರಿಸುತ್ತೇನೆ).

ಸ್ಥಳ : ಹೊನ್ನಾಳಿ

ದಿನಾಂಕಃ 23.03.2026

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹೊನ್ನಾಳಿ.